



**ಪ್ರಾಚೀನ ಮತ್ತು ಮಧ್ಯಯುಗೀನ ಹಿಂದೂ ಸಂಸ್ಕೃತಿ**

ಲೇಖಕರು: ಸ್ವಾಮಿ ಹರ್ಷಾನಂದ

ಪ್ರಕಾಶಕರು: ಶ್ರೀ ನಿತ್ಯಾನಂದ ಪ್ರಕಾಶನ, ಅಶೋಕನಗರ, ಬನಶಂಕರಿ 1ನೆಯ ಹಂತ, ಬೆಂಗಳೂರು-50;

ಪುಟ: xii+116; ಬೆಲೆ: 60/- ರೂ.

ಹಿಂದೂ ಸಂಸ್ಕೃತಿಯ ಬಗೆಗೆ ಹತ್ತಾರು ಗ್ರಂಥಗಳು ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲಿ ಹಿಂದೆಯೂ ಪ್ರಕಟವಾಗಿವೆ ಹಾಗೂ ಇಂದಿಗೂ ಪ್ರಕಟಗೊಳ್ಳುತ್ತಿವೆ. ಈ ಪ್ರವೃತ್ತಿ ನಮ್ಮ ಸಂಸ್ಕೃತಿಯ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಪ್ರಾಚೀನವಾದ, ವಿಶಾಲವಾದ ಮತ್ತು ಬಹುಮುಖ ವ್ಯಾಪ್ತಿಯುಳ್ಳ ಹಿಂದೂ ಸಂಸ್ಕೃತಿಯನ್ನು ಕುರಿತು ವಿವೇಚಿಸುವುದು ಸುಲಭವಾದ ಕೆಲಸವಲ್ಲ. ಏಕೆಂದರೆ ವಿಷಯದ ಅಗಾಧತೆ ಹಾಗೂ ವಿವಿಧ ಮಜಲುಗಳು ಆ ರೀತಿಯಲ್ಲಿವೆ. ಹಾಗಾಗಿ ಎಷ್ಟೋ ಗ್ರಂಥಗಳು ಜನಮನವನ್ನು ಮುಟ್ಟುವಲ್ಲಿ ಸೋತಿವೆ. ಹಿಂದೂ ಸಂಸ್ಕೃತಿಯನ್ನು ಕುರಿತು ಬರೆಯಬೇಕಾದರೆ ನೂರಾರು ವಿಷಯಗಳನ್ನು ಅಭ್ಯಾಸ ಮಾಡಿ, ಮನನ ಮಾಡಿ, ವಿಮರ್ಶೆ ಮಾಡಿ, ಅವೆಲ್ಲವುಗಳ ಸಾರವನ್ನು ಹೀರಿ, ಅವುಗಳನ್ನು ಓದುಗರಿಗೆ ನೀಡಬೇಕಾಗುತ್ತದೆ. ಸ್ವಾಮಿ ಹರ್ಷಾನಂದಜಿಯವರ ಪ್ರಸ್ತುತ ಪುಸ್ತಕ ಈ ಕೆಲಸವನ್ನು ಯಶಸ್ವಿಯಾಗಿ ಮಾಡಿದೆ ಎಂದು ಯಾರಿಗಾದರೂ ಮನದಟ್ಟಾಗುತ್ತದೆ. ಇದಕ್ಕೆ ಕಾರಣ ಇಷ್ಟೆ! ವಿದ್ವಲ್ಲೇಖಕರು ಮುಕ್ಕಾಲು ಶತಮಾನಕ್ಕೂ ಮೀರಿದ ತಮ್ಮ ಕಾರ್ಯಚಟುವಟಿಕೆಯಲ್ಲಿ ಹಿಂದೂ ಸಂಸ್ಕೃತಿಯನ್ನು ಕೇವಲ ಅಭ್ಯಾಸ ಮಾಡಿದವರಲ್ಲ; ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಅದರ ಸಾರವನ್ನು ಸಾಮಾನ್ಯ ಜನಗಳಿಗೆ ತಿಳಿಯಹೇಳುತ್ತಿರುವ ಶ್ರೇಷ್ಠರು. ಆದುದರಿಂದ ಅವರ ಬರವಣಿಗೆ ಕೇವಲ ಅಕ್ಯಾಡೆಮಿಕ್ ಆಗದೆ, ವಿಷಯದೊಂದಿಗೆ ತಾದಾತ್ಮ್ಯವನ್ನು ಹೊಂದಿರುವುದು ಕಾಣಬರುತ್ತದೆ. ಇಂತಹ ಪುಸ್ತಕಗಳು ತೀರ ವಿರಳ. ಇಂಗ್ಲಿಷಿನಲ್ಲಿ ಮೊದಲು ಬರೆದು ಈಗ ಅನುವಾದಗೊಂಡಿರುವ ಈ ಕೃತಿ, ಪುಟ್ಟದಾಗಿದ್ದರೂ, ಮಹತ್ವದ್ದೆನಿಸುತ್ತದೆ.




ಈ ಪುಸ್ತಕದಲ್ಲಿ ಹನ್ನೆರಡು ಅಧ್ಯಾಯಗಳಿವೆ. ಮೊದಲ ಎರಡು ಅಧ್ಯಾಯಗಳಲ್ಲಿ ಹಿಂದೂ ಮತ್ತು ಸಂಸ್ಕೃತಿ ಎನ್ನುವ ಪದಗಳನ್ನು ಸಮರ್ಥವಾಗಿ ವಿಶ್ಲೇಷಿಸಿ, ಮುಂದೆ ಹೇಳುವ ಮಾತುಗಳಿಗೆ ಬುನಾದಿಯನ್ನು ಹಾಕಿದ್ದಾರೆ. ಧರ್ಮ ಮತ್ತು ತತ್ವಶಾಸ್ತ್ರ ಹಿಂದೂ ಸಂಸ್ಕೃತಿಯ ಬುನಾದಿಯಾದುದರಿಂದ, ಅವುಗಳನ್ನು ಮೊದಲು ಗಮನಿಸಲಾಗಿದೆ. ಇದರಲ್ಲಿ ಧರ್ಮ, ಅಧ್ಯಾತ್ಮ, ದರ್ಶನ, ಯೋಗ, ಸಾಮಾನ್ಯಧರ್ಮಗಳು, ಪುರುಷಾರ್ಥಗಳು ಮುಂತಾದ ಪ್ರಮುಖ ವಿಷಯಗಳನ್ನು ವಿವರಿಸಲಾಗಿದೆ. ನಂತರ ಕಾಣಬರುವುದೇ ಹಿಂದೂ ಸಮಾಜ ಎಂಬ ಅಧ್ಯಾಯ. ಇದರಲ್ಲಿ ಹಿಂದೂ ಸಮಾಜಕ್ಕೆ ಸ್ಥಿರತೆಯನ್ನು ಒದಗಿಸಿಕೊಟ್ಟ ಪುರುಷಾರ್ಥ, ವರ್ಣವ್ಯವಸ್ಥೆ ಹಾಗೂ ಆಶ್ರಮ ಪದ್ಧತಿಗಳನ್ನು ಚರ್ಚಿಸಲಾಗಿದೆ. ವರ್ಣವ್ಯವಸ್ಥೆಯನ್ನು ತೆಗಳುವುದು ಇತ್ತೀಚಿನ ದಿನಗಳಲ್ಲಿ ಫ್ಯಾಷನ್ ಆಗಿದೆ. ಅಂತಹವರು ಸ್ವಾಮಿ ಹರ್ಷಾನಂದರು ಈ ವಿಷಯದಲ್ಲಿ ಹೇಳಿರುವ ಮಾತುಗಳನ್ನು ಅವಶ್ಯವಾಗಿ ಗಮನಿಸಬೇಕು.

ಆನಂತರ ಮುಂದಿನ ನಾಲ್ಕು ಅಧ್ಯಾಯಗಳಲ್ಲಿ, ಶಿಕ್ಷಣ ಪದ್ಧತಿ, ರಾಜಕೀಯ ವ್ಯವಸ್ಥೆ, ಅರ್ಥವ್ಯವಸ್ಥೆ ಹಾಗೂ ನ್ಯಾಯವ್ಯವಸ್ಥೆಗಳನ್ನು ಗಮನಿಸಲಾಗಿದೆ. ಇವುಗಳಲ್ಲಿ ಈ ವಿಷಯಗಳಿಗೆ ಸಂಬಂಧಿಸಿದ ಉತ್ತಮ ಖಚಿತ ಮಾಹಿತಿಗಳಿವೆ. ಅರ್ಥವ್ಯವಸ್ಥೆಯನ್ನು ಕುರಿತಾದ ಭಾಗ ತುಂಬ ಉಪಯುಕ್ತವಾಗಿದೆ. ವಿಜ್ಞಾನಕ್ಕೆ ಹಿಂದೂಗಳ ಕೊಡುಗೆ ಎಂಬ ಒಂಬತ್ತನೆಯ ಅಧ್ಯಾಯ ತುಂಬ ಬೋಧಪ್ರದವಾಗಿದೆ. ಇದನ್ನು ಓದಿದ ನಂತರ ಇಷ್ಟೊಂದು ಉನ್ನತ ಸಾಧನೆಯನ್ನು ಮಾಡಿದ ಹಿಂದೂಗಳು ಆನಂತರ ಏಕೆ ಸಪ್ಪೆಯಾದರು ಎನ್ನುವ ಚಿಂತೆ ನಮ್ಮನ್ನು ಕಾಡತೊಡಗುತ್ತದೆ. ನಗರಯೋಜನೆ, ಖಗೋಳವಿಜ್ಞಾನ, ಸಸ್ಯವಿಜ್ಞಾನ, ರಸಾಯನವಿಜ್ಞಾನ, ಗಣಿತ, ಔಷಧ ಮತ್ತು ಶಾಸ್ತ್ರಚಿಕಿತ್ಸೆ, ಸಮರವಿಜ್ಞಾನ, ಗಣಿಗಾರಿಕೆ ಮತ್ತು ಲೋಹವಿಜ್ಞಾನ, ಪಶುವೈದ್ಯ ಹಾಗೂ ಪ್ರಾಣಿಶಾಸ್ತ್ರ ಮುಂತಾದವುಗಳಲ್ಲಿ ಪ್ರಾಚೀನ ಹಿಂದೂಗಳು ಸಾಧಿಸಿದ ಪ್ರಗತಿಯನ್ನು ಉದಾಹರಣೆಗಳೊಂದಿಗೆ ಪ್ರಸ್ತಾವಿಸಲಾಗಿದೆ. ಆಧುನಿಕ ವಿಜ್ಞಾನಗಳೆಲ್ಲವೂ ಪಾಶ್ಚಿಮಾತ್ಯರ ಕೊಡುಗೆ ಎಂದು ಭಾವಿಸಿರುವ ನಮ್ಮ

ವಿದ್ಯಾರ್ಥಿ ಮತ್ತು ಯುವಪೀಳಿಗೆ ಇದನ್ನು ಅಧ್ಯಯನ ಮಾಡುವುದು ತುಂಬ ಅವಶ್ಯಕ. ಇಂತಹ ವಿಷಯಗಳನ್ನು ನಮ್ಮ ಶಾಲಾ-ಕಾಲೇಜುಗಳ ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು. ಲಲಿತಕಲೆಗಳು ಮತ್ತು ಸಂಗೀತ ಕಲೆಯನ್ನು ಕುರಿತಾದ ಮುಂದಿನ ಅಧ್ಯಾಯ ಆಸಕ್ತಿಕರವಾಗಿದೆ.

ಭಾರತದಾಚೆ ಹಿಂದೂಸಂಸ್ಕೃತಿ ಎಂಬ ಹನ್ನೊಂದನೆಯ ಅಧ್ಯಾಯ ಬಹಳ ಉಪಯುಕ್ತವಾಗಿದೆ. ನಮ್ಮ ಸಂಸ್ಕೃತಿಯ ಸಾಮಾನ್ಯ ಪರಿಚಯವಿರುವವರಿಗೂ ಈ ಸಾಧನೆಯ ಮುಖ ಅಷ್ಟಾಗಿ ತಿಳಿದಿರುವುದಿಲ್ಲ. ಅಮೆರಿಕ, ಅರೇಬಿಯಾ, ಆಫ್ಘಾನಿಸ್ಥಾನ, ಇರಾನ್, ಕೊರಿಯಾ, ಕಾಂಬೋಡಿಯಾ, ಚಂಪಾ, ಚೀನಾ, ಜಪಾನ್, ಟಿಬೆಟ್, ಥಾಯ್‌ಲೆಂಡ್, ನೇಪಾಳ, ಪೆರು, ಬರ್ಮ, ಬಾಲಿ, ಬೋರ್ನಿಯೊ, ಮಂಗೋಲಿಯಾ, ಮೆಕ್ಸಿಕೊ, ಮಲಯ, ಲಾವೋಸ್, ಶ್ರೀಲಂಕಾ, ಸುಮತ್ರಾ, ಸೋವಿಯತ್ ರಷ್ಯಾ ಮುಂತಾದ ದೇಶಗಳಲ್ಲಿ ಯಾವ ರೀತಿ ಹಿಂದೂ ಸಂಸ್ಕೃತಿಯು ತನ್ನ ಶ್ರೇಷ್ಠತೆ ಮತ್ತು ಮೇಲ್ಮೆಯಿಂದ ಪ್ರಭಾವ ಬೀರಿತು ಎನ್ನುವುದನ್ನು ಸುಂದರವಾಗಿ ಚಿತ್ರಿಸಿದ್ದಾರೆ. ಇದರಿಂದ ಹಿಂದೂ ಸಂಸ್ಕೃತಿಯು ವಿಶ್ವವ್ಯಾಪಿ ಎಂಬುದು ಖಚಿತವಾಗುತ್ತದೆ. ಇದೊಂದು ಉತ್ತಮ ಅಧ್ಯಾಯ. ಕೊನೆಯದಾಗಿ ಈ ಎಲ್ಲ ಅಂಶಗಳ ಆಧಾರದ ಮೇಲೆ ಮಾಡಿರುವ ಉಪಸಂಹಾರ ಬೋಧಪ್ರದವೆನಿಸುತ್ತದೆ. ಇಷ್ಟೆಲ್ಲ ಉತ್ತಮಿಕೆಯನ್ನು ಕಂಡ ಹಿಂದೂ ಸಂಸ್ಕೃತಿ ಈಗ ಮತ್ತೊಂದೇ ಹಾದಿ ಹಿಡಿದಿರುವುದು ತಿಳಿದಿರುವ ವಿಷಯವೇ ಸರಿ. ಪೂಜ್ಯ ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ ಸಂಯಮವಿಲ್ಲದ ಕಾಮ, ಕಾಂಚನ, ಲೋಭಗಳೇ ಎಲ್ಲ ಸಮಸ್ಯೆಗಳ ಮೂಲ. ಧರ್ಮ-ಮೋಕ್ಷಗಳನ್ನು ಕಡೆಗಣಿಸಿದರೆ ವಿನಾಶ ಖಚಿತ ಎಂಬ ಎಚ್ಚರಿಕೆಯ ಮಾತು ಗಮನಾರ್ಹ. ಮಹಾತ್ಯಾಗದಿಂದ ಮಾತ್ರ ಮಹತ್ಕಾರ್ಯಗಳನ್ನು ಸಾಧಿಸಬಹುದು ಎನ್ನುವ ವಿವೇಕಾನಂದರ ಮಾತು ಇಂದಿಗೆ ತೀರ ಪ್ರಸ್ತುತ.

ಆಕರ್ಷಕವಾಗಿರುವ, ಸರಳ ಭಾಷೆಯ ನೇರ ನಿರೂಪಣೆಯ ಈ ಪುಸ್ತಕವನ್ನು ಓದಿದನಂತರ ಒಂದು ರೀತಿಯ ಸಮಾಧಾನ ಉಂಟಾಗುತ್ತದೆ, ನಮ್ಮ ಹಿರಿಮೆ-ಗರಿಮೆಗಳ ಬಗೆಗೆ ಹೆಮ್ಮೆಯುಂಟಾಗುತ್ತದೆ. ಆ ಉನ್ನತಿಯನ್ನು ಮತ್ತೆ ಗಳಿಸಬೇಕೆಂಬ ಆಸೆ ಚಿಗುರುತ್ತದೆ. ಅದೇ ಈ ಪುಸ್ತಕದ ಶ್ರೇಷ್ಠತೆ. ಪ್ರತಿಯೊಬ್ಬ ಸಂಸ್ಕೃತಿಪ್ರಿಯರ ಮನೆಯಲ್ಲಿಯೂ ಇರಬೇಕಾದ ಪುಸ್ತಕವಿದು. ಮಕ್ಕಳು ಇದನ್ನು ಓದುವಂತೆ ಪ್ರಚೋದಿಸಬೇಕಾದುದು ಹಿರಿಯರ ಕರ್ತವ್ಯ. ಹತ್ತಾರು ಪುಸ್ತಕಗಳನ್ನು ರಚಿಸಿ, ಸಾಹಿತ್ಯ ಮತ್ತು ಅಧ್ಯಾತ್ಮ ಲೋಕದಲ್ಲಿ ಖ್ಯಾತರಾಗಿರುವ ಪೂಜ್ಯ ಸ್ವಾಮಿ ಹರ್ಷಾನಂದಜಿಯವರಿಗೆ ಹಿಂದೂಸಂಸ್ಕೃತಿಯಲ್ಲಿ ಆಸಕ್ತಿ ಇರುವ ಎಲ್ಲರೂ ಕೃತಜ್ಞರಾಗಿರಬೇಕು. ಪುಸ್ತಕದ ಮುದ್ರಣ ಚೆನ್ನಾಗಿದೆ; ಕೈಗೆಟುಕುವ ಬೆಲೆ ಇನ್ನೊಂದು ಆಕರ್ಷಣೆ. ನಾಲ್ಕಾರು ಚಿತ್ರಗಳನ್ನು ಸೇರಿಸಿದ್ದರೆ ಇನ್ನೂ ಆಕರ್ಷಕವಾಗುತ್ತಿತ್ತು. ಪೂಜ್ಯ ಲೇಖಕರು, ಸಮರ್ಥ ಅನುವಾದಕ ಶ್ರೀ ಎಚ್.ವಿ. ವಿಶ್ವನಾಥ ಹಾಗೂ ಪ್ರಕಾಶಕರು ಅಭಿನಂದನಾರ್ಹರು.

—ಡಾ. ಎ.ವಿ. ನರಸಿಂಹಮೂರ್ತಿ,
ಭಾರತೀಯ ವಿದ್ಯಾಭವನ, ಮೈಸೂರು.

## 'ಭಗವತ್ಸಾಕ್ಷಾತ್ಕಾರ ಇಲ್ಲವೇ ಪ್ರಾಯೋಪವೇಶ'



ವರಾಹನಗರದ ತಪಸ್ಸಿನ ಕಾಲದಲ್ಲಿ, ತಾವು ಮಧ್ಯರಾತ್ರಿ ಸ್ಮಶಾನಕ್ಕೆ ಹೋಗಿ ಕೆಲವು ತಾಂತ್ರಿಕ ಸಾಧನೆಗಳನ್ನು ಅಭ್ಯಾಸಮಾಡಬೇಕೆಂದು ತ್ರಿಗುಣಾತೀತಾನಂದರಿಗೆ ತುಂಬ ಆಸೆಯಿತ್ತು. ವಿವೇಕಾನಂದರು ಇದಕ್ಕೆ ಅನುಮತಿ ಕೊಡುವುದಿಲ್ಲವೆಂದು ಅವರಿಗೆ ಗೊತ್ತು. ಆದ್ದರಿಂದ ಒಂದು ರಾತ್ರಿ ಉಳಿದ ಎಲ್ಲರೂ ನಿದ್ರಿಸುತ್ತಿರುವಾಗ, ತ್ರಿಗುಣಾತೀತರು ಸದ್ದಿಲ್ಲದೆ ಸ್ಮಶಾನಕ್ಕೆ ಹೋಗಲು ಸಿದ್ಧತೆ ಮಾಡಿಕೊಳ್ಳತೊಡಗಿದರು. ಆಗ ವಿವೇಕಾನಂದರು "ಎಲ್ಲಿಗೆ ಹೋಗುತ್ತಿರುವೆ?" ಎಂದು ಕೂಗಲು, ಅವರು ಸುಮ್ಮನೆ ನಿಲ್ಲಬೇಕಾಯಿತು. ವಿವೇಕಾನಂದರು, "ಶ್ರೀರಾಮಕೃಷ್ಣರು ನನ್ನ ಕನಸಿನಲ್ಲಿ ಬಂದು ನೀನೆಲ್ಲಿಗೆ ಹೋಗುತ್ತಿರುವೆ ಎಂದು ತಿಳಿಸಿದರು. ನೀನು ಹೋಗಕೂಡದೆಂದೂ, ತಾವು ಇದೆಲ್ಲವನ್ನೂ ನಮಗಾಗಿಯೇ ಮಾಡಿರುವುದೆಂದೂ, ನಾವು ಅವರ ಮೇಲೆ ಮನಸ್ಸಿಟ್ಟರೆ ಸಾಕೆಂದೂ ಸ್ಪಷ್ಟವಾಗಿ ಹೇಳಿದರು" ಎಂದು ಹೇಳಿದರು. ಇದೇ ತ್ರಿಗುಣಾತೀತರ ತಾಂತ್ರಿಕ ಸಾಧನೆಯ ಅಭ್ಯಾಸದ ಕೊನೆಯ ಪ್ರಯತ್ನವಾಯಿತು.

ತ್ರಿಗುಣಾತೀತರು ಸ್ವಭಾವತಃ ಅತಿರೇಕದ ಮನುಷ್ಯ. ಒಮ್ಮೆ ಅವರು ತಮ್ಮ ಮಂತ್ರವನ್ನು ಹಗಲಿರುಳೂ ಎಡೆಬಿಡದೆ ಪುರಶ್ಚರಣ ಮಾಡತೊಡಗಿದರು. 'ಭಗವತ್ಸಾಕ್ಷಾತ್ಕಾರ ಇಲ್ಲವೇ ಪ್ರಾಯೋಪವೇಶ' ಎಂಬುದು ಅವರ ಗುರಿಯಾಗಿತ್ತು. ಈ ತರುಣ ಗುರುಭಾಯಿಯ ಬಗ್ಗೆ ಆತಂಕಗೊಂಡ ಶಿವಾನಂದರು ಕೊಠಡಿಯಿಂದ ಹೊರಗೆ ಬಾ ಎಂದು ಮನವೊಲಿಸಲು ಯತ್ನಿಸಿದರು. ತ್ರಿಗುಣಾತೀತರು ಬಂದರಾದರೂ ಪ್ರಾಯೋಪವೇಶವನ್ನು ಮುರಿಯಲು ಒಪ್ಪಲಿಲ್ಲ. ಕೊನೆಗೆ, ಅವರು ಆಹಾರ ತಿನ್ನುತ್ತಿರುವಾಗ ಶಿವಾನಂದರು ಅವರನ್ನು ಮುಟ್ಟಿಕೊಂಡು ಮಂತ್ರದ ಪುರಶ್ಚರಣವನ್ನು ಅವರ ಪರವಾಗಿ ಮುಂದುವರೆಸುತ್ತಿರುವುದು ಎಂದು ತೀರ್ಮಾನವಾಯಿತು. ಹೀಗೆ ಅವರು ಬೇಗನೆ ಊಟ ಮುಗಿಸಿ ಜಪವನ್ನು ಮುಂದುವರಿಸುತ್ತಿದ್ದರು.